ತಕ್ಷಣ ತೆಗೆದು ಹಾಕುವ ವ್ಯವಸ್ಥೆ ಮಾಡುತ್ತೇನೆ.

ಸಂಕೇಶ್ವರ-ಹುಕ್ಕೇರಿ ಪಟ್ಟಣಗಳ ನೀರು ಸರಬರಾಜು ಪೈಪುಗಳನ್ನು ಬದಲಾಯಿಸುವುದು.

37(99)

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ(ಸಂಕೇಶ್ವರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸಂಕೇಶ್ವರ-ಹುಕ್ಕೇರಿ ಪಟ್ಟಣಗಳ ಕುಡಿಯುವ ನೀರಿನ ಯೋಜನೆಯು ಈಗಾಗಲೇ ಪ್ರಾರಂಭಗೊಂಡಿದ್ದು, ಸಂಕೇಶ್ವರ ಪಟ್ಟಣದಲ್ಲಿ ಇರುವ ಹಳೆಯ ವಿತರಣಾ ಕೊಳವೆಗಳನ್ನು (ನೀರು ಸರಬರಾಜು ಪೈಪುಗಳನ್ನು) ಬದಲಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

2. ನೀರು ವಿತರಣಾ ಪೈಪುಗಳು ತುಂಬಾ ಹಳೆಯದಾಗಿರುವುದರಿಂದ ಹೆಚ್ಚಿನ ನೀರು ಪೋಲಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

3. ಹಾಗಿದ್ದಲ್ಲಿ, ಈ ವಿತರಣಾ ಪೈಪುಗಳನ್ನು ಎಂದು ಬದಲಾಯಿಸಲಾಗುವುದು?

4. ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು? ಹಾಗೂ ಇದಕ್ಕೆ ಹಣ ಒದಗಿಸಲು ಇರುವ ತೊಂದರೆಗಳೇನು?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

1. ಇದೆ.

2. ಬಂದಿದೆ.

3 ಮತ್ತು 4. ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ಸಂಕೇಶ್ವರ ಮತ್ತು ಹುಕ್ಕೇರಿ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ 1999ನೇ ಇಸವಿಯಲ್ಲಿ ಪ್ರಾರಂಭವಾಗಿದೆ. ಸುಮಾರು 25-30 ವರ್ಷಗಳ ಹಿಂದೆ ಡಿಸ್ಟ್ರಿಬ್ಯೂಷನ್ ಆಫ್

ಪೈಪ್‌ಲೈನ್, ಹಾಕಿದ ಹಳೆಯ ಪೈಪ್‌ಲೈನ್ ಏನಿದೆ, ಹಿಡ್ಕಲ್ ಡ್ಯಾಂನಿಂದ ಕುಡಿಯುವ ನೀರಿನ ವ್ಯವಸ್ಥೆಗೆ ನಾವು ಈಗಾಗಲೇ ಬಂದಿದ್ದೇವೆ. ನೀರು ಸರಿಯಾದ ರೀತಿಯಲ್ಲಿ ಜನಗಳಿಗೆ ಹೋಗಿ ಮುಟ್ಟುತ್ತಿಲ್ಲ. ಗಟಾರ್ ಮುಖಾಂತರ ನೀರು ಹೊಳೆಗೆ ಹೋಗುವುದಕ್ಕೆ ಹಳ್ಳ ತೋಡಿಕೊಂಡು 10-12 ಎಕರೆ ವರೆಗೆ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ನಾವು ದುಡ್ಡು ಕೊಡುವವರಿಗೆ ಕುಡಿಯುವ ನೀರು ಕೊಡುವುದು ಬಿಟ್ಟು ಇರಿಗೇಷನ್ ಪರ್ಪಸ್‌ಗಾಗಿ ಉಪಯೋಗಿಸುವ ಹಾಗಾಗುತ್ತಿದೆ. ಸುಮಾರು ನಾಲ್ಕು ಕೋಟಿ ರೂಪಾಯಿಗಳ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಮತ್ತು ಎಷ್ಟು ದುಡ್ಡು ಕೊಡುತ್ತೀರಿ? ದುಡ್ಡು ಇದೆಯೇ ಅಥವ ಇಲ್ಲವೇ? ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳುವುದಕ್ಕೆ ಇಚ್ಚೆ ಪಡುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸಂಕೇಶ್ವರ ಪಟ್ಟಣಕ್ಕೆ 19.6.2000ರಿಂದ ಸುಮಾರು ಏಳು ಕೋಟಿ ರೂಪಾಯಿಗಳ ಯೋಜನೆ ಈಗಾಗಲೇ ಕಾರ್ಯಗತ ಗೊಳಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಆದರೆ ಸನ್ಮಾನ್ಯ ಸದಸ್ಯರು ಹೇಳತಕ್ಕಂತಹ ವಿಚಾರ ಡಿಸ್ಟ್ರಿಬ್ಯೂಷನ್ ವ್ಯವಸ್ಥಿತ ರೀತಿಯಲ್ಲಿ ವಿತರಣಾ ವ್ಯವಸ್ಥೆ ಇಲ್ಲವೆಂದು ಪಾಟೀಲರು ಬಹಳ ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ ನೀಡಬೇಕೆಂದು ಸರ್ಕಾರದ ಮುಂದೆ ಬಹಳ ವರ್ಷಗಳಿಂದ ಪ್ರಸ್ತಾವನೆ ಇದೆ. ಅದನ್ನೂ ಕೂಡ ಆದಷ್ಟು ಶೀಘ್ರ ನಾಲ್ಕು ಕೋಟಿ ರೂಪಾಯಿಗಳ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಹಾಗು ಮಂಜೂರಾತಿ ನೀಡುವುದಕ್ಕೆ ಮುಂದಿನ ವರ್ಷ ಪ್ರಯತ್ನ ಮಾಡುತ್ತೇನೆ.

ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್: ಬರುವ ಹಣಕಾಸಿನ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆ. ಅದನ್ನು ಮುಂದಿನ ಹಣಕಾಸು ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಸ್ಪಷ್ಟವಾಗಿ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮುಂದಿನ ವರ್ಷ ನಾಲ್ಕು ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ ಕೊಡುತ್ತೇವೆ.

ಶ್ರೀ ಎನ್‌ಯೋಗೀಶ್ ಭಟ್: ಕಳೆದ ಅಧಿವೇಶನದಲ್ಲಿ ಮತ್ತು ಈ ಅಧಿವೇಶನದಲ್ಲಿ ಹತ್ತು ಹಲವು ಪ್ರಶ್ನೆಗಳು ಕೇವಲ ತಾಂತ್ರಿಕ ಕಾರಣಕ್ಕೋಸ್ಕರ ಯಾವ ಇಲಾಖೆ ಎಂದು ಗುರುತಿಸುವುದಕ್ಕೆ ಇಷ್ಟು ತಡವಾಗುತ್ತದೆ. ಕಾರ್ಯದರ್ಶಿಯವರಿಗೆ ಪಟ್ಟಿ ಮಾಡಿ ಕಳುಹಿಸಿದರೆ ಅನುಕೂಲವಾಗುತ್ತಿತ್ತು.

ಅಧ್ಯಕ್ಷರು: ಬೇರೆ ಇಲಾಖೆಯ ವಿಚಾರವನ್ನು ಈ ಇಲಾಖೆ ಜೊತೆ ಮಿಕ್ಸ್ ಮಾಡಿ ಕೇಳಿರುತ್ತೀರಿ. ಆಗ ಯಾವ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಬೇಕೆಂದು ಗೊತ್ತಾಗುವುದಿಲ್ಲ. Now I am examining all the oral questions put on the floor of the house. ಅನ್‌ಸ್ಟಾರ್ಡ್ ಕ್ವೆಶ್ಚನ್ಸ್ ಬಿಟ್ಟು ಓರಲ್ ಕ್ವೆಶ್ಚನ್ಸ್‌ಗೆ ಮಾತ್ರ ನಾನು ಅಲೊ ಮಾಡುತ್ತಿದ್ದೇನೆ. Each question I am going to examine.

ಆಲೂರು ನಗರದಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ.

39(108)

ಶ್ರೀ ಬಿ.ಬಿ.ಶಿವಪ್ಪ(ಸಕಲೇಶಪುರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ತಾಲ್ಲೂಕಿನ ಆಲೂರು ನಗರದಲ್ಲಿ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು?

ಆ) ಹಾಗಿದ್ದಲ್ಲಿ ಈ ಕೆಲಸ ಪೂರ್ಣಗೊಂಡು ನಗರಕ್ಕೆ ನೀರು ಸರಬರಾಜು ಯಾವಾಗ ಆಗುವುದು?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ರೂ. 32.00 ಲಕ್ಷಗಳು.

ಆ) ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು ಆಗಸ್ಟ್ 2001ರ ವೇಳೆಗೆ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಯೋಚಿಸಲಾಗಿದೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದಾರೆ. ಈ ಯೋಜನೆ ಕೇಂದ್ರ ಪುರಸ್ಕೃತ ತ್ವರಿತ ನೀರುಸರಬರಾಜು ಯೋಜನೆಯಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರ 10. 10. 1999ರಲ್ಲಿ 84 ಲಕ್ಷ ರೂಪಾಯಿಗಳಿಗೆ ಕೊಟ್ಟಿದೆ. ತಾವು 32 ಲಕ್ಷ ಖರ್ಚಾಗಿದೆ ಎಂದು ಕಾಣಿಸಿದ್ದೀರಿ. ಖರ್ಚಾಗಿರತಕ್ಕಂತಹ 32 ಲಕ್ಷ ರೂಪಾಯಿಗಳಲ್ಲಿ ಕೇಂದ್ರ ಸರ್ಕಾರದ ಪಾಲು ಏನು, ತಮ್ಮ ಪಾಲೇನು? ಉಳಿದ ಹಣ ಮತ್ತು ಕಾಮಗಾರಿಯನ್ನು ಎಂದು ಪೂರೈಸಲಾಗುತ್ತದೆ? ಆಲೂರು ಪಟ್ಟಣ ನೀರಿಗಾಗಿ ತುಂಬ ತೊಂದರೆ